Q.P. Code – 32304

# Third Semester B.Sc./B.C.A. Degree Examination, October/November 2019

*(CBCS – New – Semester Scheme)*

**ಕನ್ನಡ ಭಾಷೆ**

## Paper III – ಜೀವನ ಚರಿತ್ರೆ – ಬೆಳಕಿನೊಂದು ಕಿರಣ ಮೇರಿ ಕ್ಯೂರಿ ಮತ್ತು ವಿಚಾರ ಕಿರಣ – 3

*Time : 3 Hours]* *[Max. Marks : 90*

ಭಾಗ – 1

ಜೀವನ ಚರಿತ್ರೆ – ಬೆಳಕಿನೊಂದು ಕಿರಣ ಮೇರಿಕ್ಯೂರಿ

I. (ಅ) ಒಂದರ ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಮೇರಿಗೆಂದೂ ವಿವಾಹ–ವಿಜ್ಞಾನಗಳ ನಡುವೆ ಆಯ್ದುಕೊಳ್ಳುವ ವಿಚಾರವೇ ಬಂದಿರಲಿಲ್ಲ. ಅವಳಲ್ಲಿ ಶಕ್ತಿ ಇತ್ತು ಛಲವಿತ್ತು, ವಿವಾಹವನ್ನು, ತಾಯ್ತನವನ್ನು, ವಿಜ್ಞಾನವನ್ನು ಎಲ್ಲವನ್ನೂ ತನ್ನ ಪ್ರೀತಿಯಿಂದ ತೀವ್ರತೆಯಿಂದ ನಿಭಾಯಿಸಿ ಗೆಲ್ಲಬಲ್ಲ ಆತ್ಮ ವಿಶ್ವಾಸವಿತ್ತು. ಮೇರಿಯ ವ್ಯಕ್ತಿತ್ವ ಪತ್ನಿಯಾಗಿ, ಮಾತೆಯಾಗಿ, ವಿಜ್ಞಾನಿಯಾಗಿ, ಪ್ರಾಧ್ಯಾಪಕಳಾಗಿ ಹರಿದು ಹಂಚಿ ಹೋಗಿರಲಿಲ್ಲ. ಈ ಎಲ್ಲಾ ಪಾತ್ರಗಳು ಪರಸ್ಪರ ಪೂರಕವಾದ ಘನಚಿತ್ರದಂತಿದ್ದಳು ಮೇರಿ.

2. ಅವರ ನಿರೀಕ್ಷೆಯನ್ನು ಮೀರಿ ರೇಡಿಯಂಗೆ ಮೋಹಕ ಬಣ್ಣವಿತ್ತು. ತಿಳಿನೀಲ ಬಣ್ಣವನ್ನು ಹೊರಸೂಸಿತು ರೇಡಿಯಂ ಬರೀ ಬಣ್ಣವಲ್ಲ ರೇಡಿಯಂಗೆ ಸ್ವಯಂಪ್ರಕಾಶವಿತ್ತು ಆ ಪಾಳು ಕೊಟ್ಟಿಗೆಯಲ್ಲಿ ಅತ್ಯಮೂಲ್ಯ ತುಣುಕುಗಳ ಮಿಣುಕು ಹುಳದಂತೆ ಮಿಂಚಿದವು. ಮಾಂತ್ರಿಕನ ಮಾಯಾ ದಂಡದಲ್ಲಿ ರೂಪುಗೊಂಡ ಮಾಯಾಲೋಕ! ಆ ನೀರವ ರಾತ್ರಿಯ ಕತ್ತಲಲ್ಲಿ, ವಿಸ್ಮಯ ಪ್ರಕಾಶ ಬೆಳಕನ್ನರಸಿ ಹೋದ ದಂಪತಿಗಳು ನಕ್ಷತ್ರ ಪುಂಜವನ್ನೇ ಹಿಡಿದು ತಂದಿದ್ದರು!

(ಆ) ಎರಡನ್ನು ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. ಫ್ರಾನ್ಸ್‌ನ ವಿಜ್ಞಾನದ ಅಕಾಡೆಮಿಯೊಳಗೆ ಹೆಂಗಸರಿಗೆ ಸ್ಥಳವಿಲ್ಲ.
2. ಒಂದಷ್ಟು ಫ್ರೆಂಚ್ ಭಾಷೆಯನ್ನು ಹೇಳಿಕೊಟ್ಟು ಹೊಟ್ಟೆ ಹೊರೆಯಬಲ್ಲೆ.
3. ಅದು ಹೇಗೆ ಸಾಧ್ಯ? ಪೇಟೆಂಟ್ ಮಾಡುವದು ವೈಜ್ಞಾನಿಕ ಪ್ರವೃತ್ತಿಗೆ ವಿರುದ್ಧ.

COLLEGE OF ARTS, SCIENCE & COM TUMKUR LIBRARY & INFORMATION

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಬಾಲ್ಯದಲ್ಲಿ ಮೇರಿಯನ್ನು ಯಾವ ಹೆಸರಿನಲ್ಲಿ ಕರೆಯಲಾಗುತ್ತಿತ್ತು?

2. ಶ್ರೀಮತಿ ಬ್ರೋನಿಸ್ಲಾವಾ ಸ್ಕ್ಲೋಡೋವಸ್ಕಿ ಯಾರು?

3. ವಿಕಿರಣ ಶಕ್ತಿಯ ವಿಶಿಷ್ಟ ಗುಣವನ್ನು ಮೇರಿ ಏನೆಂದು ಕರೆದಳು?

4. ನೋಬಲ್ ಪಾರಿತೋಷಕವನ್ನು ಮೇರಿ ಕ್ಯೂರಿ ಯಾವ ವರ್ಷದಲ್ಲಿ ಪಡೆದಳು?

5. ಮೇರಿಯ ಮೊದಲ ಮಗಳ ಹೆಸರೇನು?

(ಈ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2 × 2 = 4)

1. ವ್ಲಾಡಿಸ್ಲಾವ ಸ್ಕ್ಲೋಡೋವಸ್ಕಿ

2. ಪಿಯರ್ ಕ್ಯೂರಿ

3. ಮೇರಿಯ ಪ್ರಯೋಗಶಾಲೆ

II. (ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2 × 5 = 10)

1. ಮಾತೃಭೂಮಿಯ ಕುರಿತು ಮೇರಿ ಕ್ಯೂರಿಗಿದ್ದ ಅಭಿಮಾನವನ್ನು ವಿವರಿಸಿ.

2. ಮೇರಿ ಕ್ಯೂರಿಯ ಬದುಕಿಗಂಟಿದ ಬಡತನದ ಸ್ವರೂಪವನ್ನು ವಿವರಿಸಿ.

3. ರೇಡಿಯಂ ಅನ್ನು ಸಾಕ್ಷಾತ್ಕರಿಸಿಕೊಂಡ ಅದ್ಭುತ ಕ್ಷಣಗಳನ್ನು ನಿಮ್ಮ ಮಾತಿನಲ್ಲಿ ಚಿತ್ರಿಸಿ.

(ಆ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ಹೆಜ್ಜೆ ಮೂಡದ ಹಾದಿಯಲ್ಲಿ ಹೊರಟ ಈ ಸಾಹಸಿ, ವಿಜ್ಞಾನದ ಭವಿಷ್ಯವನ್ನೇ ಬದಲಿಸಿದಳು – ಎಂಬ ಹೇಳಿಕೆಯನ್ನು ಚರ್ಚಿಸಿ.

2. ಯುದ್ಧ ರಂಗದಲ್ಲಿ ಮಾನವತಾವಾದಿಯಾಗಿ ಸ್ಪಂದಿಸಿದ ಮೇರಿಯ ಚಿತ್ರಣವನ್ನು ನೀಡಿ.

3. ಮೇರಿ ಕ್ಯೂರಿಯ ಪರಿಪೂರ್ಣ ವ್ಯಕ್ತಿತ್ವವನ್ನು ಚಿತ್ರಿಸಿ.

## ಭಾಗ – 2

## ವಿಚಾರ ಕಿರಣ

III. (ಅ) ಒಂದರ ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಸೌಂದರ್ಯವನ್ನು ಅಳೆಯುವಲ್ಲಿ ಮತ್ತು ಮೈಬಣ್ಣ ಹಾಗೂ ಸೌಂದರ್ಯಗಳ ಅಂತರವನ್ನು ಗುರುತಿಸುವಲ್ಲಿ ರಸಪ್ರಜ್ಞೆಯ ಒಂದು ಹೊಸಕ್ರಾಂತಿಯೇ ನಡೆಯಬೇಕು. ಅಂಥ ಕ್ರಾಂತಿ ಮಾತ್ರ ಇಡೀ ಪ್ರಪಂಚದ ಮೇಲೆ ಸ್ವಾತಂತ್ರ್ಯದ ಹೊಸಗಾಳಿಯನ್ನೇ ತೂರಿಬಿಡಬಲ್ಲದು, ಯಾವುದೇ ರಾಜಕೀಯ ಅಥವಾ ಆರ್ಥಿಕ ಕ್ರಾಂತಿಗೆ ಸರಿಸಾಟಿಯಾಗಿ.

2. ವಿಜ್ಞಾನಿಗೆ ಸತ್ಯದ ಹೊರತು ಇನ್ನಾವುದೂ ವೇದವಾಕ್ಯವಲ್ಲ. ವಿಜ್ಞಾನಿ ಎಲ್ಲ ಅನುಭವವನ್ನು ಪ್ರಯೋಗದ ಒರೆಗಲ್ಲಿಗೆ ಹಚ್ಚುತ್ತಾನೆ. ಈ ಅಗ್ನಿ ಪರೀಕ್ಷೆಯಲ್ಲಿ ಯಶಸ್ಸು ಸಿಕ್ಕಿದಷ್ಟು ಮಾತ್ರ ವಿಜ್ಞಾನ ತನ್ನದನ್ನಾಗಿ ಮಾಡಿಕೊಳ್ಳುತ್ತದೆ. ಪ್ರಯೋಗದಿಂದ ಸತ್ಯವನ್ನು ಕಂಡುಹಿಡಿಯುವ ಮನೋಭಾವ ಹಿಂದೆ ಉದ್ದಾಮ ಪಂಡಿತರಿಗೂ ಇರಲಿಲ್ಲ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. 'ಯಂತ್ರ ನಾಗರಿಕತೆ' ಲೇಖನವನ್ನು ಯಾರು ಬರೆದಿದ್ದಾರೆ?
2. ಮದುರೆ ಯಾವ ನದಿಯ ದಂಡೆಯಲ್ಲಿರುವ ಪಟ್ಟಣ?
3. ಒಮ್ಮೆ ಉಸಿರನ್ನು ಎಳೆದುಕೊಂಡಾಗ ನಾವು ಎಷ್ಟು ಆಮ್ಲಜನಕದ ಅಣುಗಳನ್ನು ಸೇವಿಸುತ್ತೇವೆ?
4. 'ಹುಟ್ಟುತ್ತ ವಿಶ್ವಮಾನವ' ಲೇಖನದ ಕರ್ತೃ ಯಾರು?
5. ಎಷ್ಟು ವಾರಗಳಲ್ಲಿ ಹಳೆಯ ಲಿವರ್‌ಗೆ ಬದಲಾಗಿ ಹೊಸ ಲಿವರ್ ಬಂದಿರುತ್ತದೆ?

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಎಸ್. ನರಸಿಂಹಯ್ಯ
2. ಡಾ॥ ದೀಪಕ್ ಚೋಪ್ರಾ
3. ಸಂಸ್ಕೃತಿ

SREE SIDDAGANGA COLLEGE OF ARTS, SCIENCE & COMMERCE FOR WOMEN
TUMKUR
LIBRARY & INFORMATION CENTRE
Page No ..........
Date..........

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ನಮ್ಮ ಪ್ರಜಾಪ್ರಭುತ್ವ ಕಲುಷಿತವಾಗಲು ಕಾರಣಗಳೇನು? ಕುವೆಂಪು ವಿಚಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
2. ವೈಜ್ಞಾನಿಕ ಮನೋವೃತ್ತಿ ಎಂದರೇನು? ಪರಾಮರ್ಶಿಸಿ.
3. 'ಸೌಂದರ್ಯದ ಮಾನದಂಡವು ಮೈ ಬಣ್ಣವಲ್ಲ' – ಈ ಹೇಳಿಕೆಯನ್ನು ಚರ್ಚಿಸಿ.

---